# ಜಿಜ್ಞಾಸಾ ಪರ್ವ

ನಾವು ಪ್ರತಿನಿತ್ಯ ಅನೇಕ ವಿಚಾರಗಳನ್ನು ಮಾಡುತ್ತಿರುತ್ತೇವೆ. ಈ ವಿಚಾರಗಳಿಗೆ ಒಂದು ನಿರ್ದಿಷ್ಟವಾದ ಗುರಿಯಿರಬೇಕಾಗುತ್ತದೆ. ಆದರೆ, ಅನೇಕ ಬಾರಿ ಗೊತ್ತುಗುರಿಯಿಲ್ಲದೆಯೇ ವಿಚಾರಗಳನ್ನು ಮಾಡುತ್ತಿರುತ್ತೇವೆ. ವಿಚಾರ ಎಂಬ ಮಾತಿಗೆ ಸರಿಯಾಗಿ ಗುರುತಿಸಿ ಮುಂದೆ ಹೋಗುವುದೆಂದೇ ಅರ್ಥ. ವಿಚಾರ ಎಂಬ ಪದದಲ್ಲಿ 'ಚರ್' ಎಂಬ ಗತ್ಯರ್ಥಕ ಧಾತು ಉಂಟು. ನಾವು ಈ ಧಾತುವಿನ ದಾರಿಯನ್ನು ಮರೆತುಬಿಟ್ಟಿದ್ದೇವೆ. ಪೂರ್ವಿಕರು ವಿಚಾರದ ಎಳೆಯನ್ನು ಹಿಡಿದು ಚರ್ಚಿಸುತ್ತಿದ್ದರು. ಆ ಚರ್ಚೆಯು ಸಕಾರಾತ್ಮಕವಾದ ದಿಕ್ಕಿನ ಕಡೆಗೆ ಅವರನ್ನು ಕರೆದುಕೊಂಡು ಹೋಗುತ್ತಿತ್ತು. ನಾವು ಬದುಕಿರುವ ಕಾಲದಲ್ಲಿ 'ಜಿಜ್ಞಾಸು ಜನರೇ ಒಂದು ಮಹಾಪರ್ವತವಾಗಿ ನಮ್ಮ ಮುಂದೆ ಕೂತಿದ್ದಾರೆ. ಇವರಿಗೊ ಲೌಕಿಕದ ಗಂಟನ್ನು ಬಿಡಿಸದೆ ಗತ್ಯಂತರವಿಲ್ಲವಾಗಿದೆ. ರಾಜಕಾರಣಿಗಳು, ಲೇಖಕರು, ವಿದ್ವಾಂಸರು, ಕಲಾವಿದರು ಹೀಗೆ ಹಲವಾರು ಜನ ತಮ್ಮ ತಮ್ಮ ಕ್ಷೇತ್ರಗಳ ನೆಲೆಯಲ್ಲಿ ನಿಂತು ಜಿಜ್ಞಾಸೆ ಮಾಡುತ್ತಿರುವುದು ಸರಿಯಷ್ಟೆ. ಇಲ್ಲದೆ ಹೋದರೆ ಅಪಸವ್ಯಗಳಿಗೆ ದಾರಿಮಾಡಿಕೊಟ್ಟಂತಾಗುತ್ತದೆ. ಪ್ರತಿಯೊಬ್ಬ ಜಿಜ್ಞಾಸು ತಮ್ಮ ತಮ್ಮ ಸೀಮೆಯಲ್ಲೇ ನಿಲ್ಲುವುದು ಎಂದಿಗೂ ಅವಶ್ಯ. ಆದರೆ, ಅನೇಕ ಬಾರಿ ಸೀಮೋಲ್ಲಂಘನ ನಡೆಯುತ್ತಲೇ ಇರುತ್ತದೆ. ಜಿಜ್ಞಾಸೆ ಎಂಬುದು ನಿಂತನೀರಲ್ಲ. ಅದು ಹರಿಯುವ ನೀರು. ಲೋಕದ ವಿಚಾರವಾಗಲೀ ವೇದಾಂತದ ವಿಚಾರವಾಗಲೀ ಸತ್ಯವನ್ನೂ ತಿಳಿವನ್ನೂ ಹುಡುಕಿಕೊಂಡು ಹೋಗುವ ಹಾದಿಯೆಂದು ನಾವೀಗ ಅರ್ಥಮಾಡಿಕೊಳ್ಳಬೇಕಾಗಿದೆ.

ಬಾದರಾಯಣರು ತಮ್ಮ 'ಬ್ರಹ್ಮಸೂತ್ರದ ಮೊದಲ ಸೂತ್ರದಲ್ಲಿಯೇ 'ಅಥಾತೋ ಬ್ರಹ್ಮ ಜಿಜ್ಞಾಸಾ ಎಂಬ ಮಾತನ್ನು ಸಿದ್ಧಾಂತವಾಗಿ ಬಳಸಿದ್ದಾರೆ. ಈ ಸೂತ್ರದಲ್ಲಿ 'ಜಿಜ್ಞಾಸಾ ಎಂಬ ಮಾತಿದೆಯಷ್ಟೆ. ಈ ಮಾತಿಗೆ ಚರ್ಚೆ, ಚಿಂತನೆ ಎಂಬ ಸಾಮಾನ್ಯವಾದ ಅರ್ಥವನ್ನು ನಾವು ಹೇಳಿಬಿಡುತ್ತೇವೆ. ಆದರೆ, ತಿಳಿದುಕೊಳ್ಳಬೇಕೆಂಬ ಆಸೆಯಿಂದ ವಿಚಾರ ಮಾಡಲು ಯಾರು ಹೊರಡುತ್ತಾರೋ ಅವರು ಮಾತ್ರ ಜಿಜ್ಞಾಸು.

ಸ್ವಾಮಿ ವಿವೇಕಾನಂದರು ಭಗವಾನ್ ಶ್ರೀರಾಮಕೃಷ್ಣಪರಮಹಂಸರ ಬಳಿ ಮೊದಲ ಬಾರಿ ಹೋದಾಗ ವಿಚಾರದ ಸಂತೆಯನ್ನೇ ತಲೆ ತುಂಬಾ ತುಂಬಿಕೊಂಡಿದ್ದರು. ರಾಮಕೃಷ್ಣಪರಮಹಂಸರ ಪ್ರಭಾವಕ್ಕೆ ಒಳಗಾದಂತೆ 'ಜಿಜ್ಞಾಸು ಪ್ರವೃತ್ತಿ' ಅವರಲ್ಲಿ ಬೆಳೆಯಿತು. ಸ್ವಾಮಿ ವಿವೇಕಾನಂದರಿಗೆ ಯಾವುದೇ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕೆಂಬ ಮನೀಷೆ ಸದಾ ಅವರಲ್ಲಿ ಮನೆಮಾಡಿತ್ತು.

ಭಗವದ್ಗೀತೆಯು ನಾಲ್ಕು ಬಗೆಯ ಸಾಧನೆಯ ವ್ಯಕ್ತಿತ್ವದ ನೆಲೆಯನ್ನು ಹೇಳುತ್ತದೆ. ಅವು ಹೀಗಿವೆ: ಆರ್ತ, ಅರ್ಥಾರ್ಥಿ, ಜಿಜ್ಞಾಸು ಮತ್ತು ಜ್ಞಾನಿ. ಮನುಷ್ಯನು ಹಂತಹಂತವಾಗಿ ಇವುಗಳ ಮೂಲಕ ದಾಟಲು ಯತ್ನಿಸಬೇಕು. ದಾಟುವುದರ ಮೂಲಕ ತನ್ನನ್ನು ತಾನು ತಿಳಿಯಲು ಯತ್ನಿಸಬೇಕಾಗುತ್ತದೆ. ಈ ಮಾತು ಲೋಕದ ಎಲ್ಲಾ ಜನರಿಗೂ ಅನ್ವಯಿಸುತ್ತದೆ. ಭಗವದ್ಗೀತೆಯಲ್ಲಿ ಹೇಳಿರುವ ಈ ನಾಲ್ಕು ಸಂಗತಿಗಳನ್ನು ಒಂದೊಂದಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನವನ್ನು ನಾವೀಗ ಮಾಡೋಣ: ಪ್ರತಿಯೊಬ್ಬ ವ್ಯಕ್ತಿಗೂ ಹಲವಾರು ವಿಚಾರಗಳು ಕಾಡುತ್ತಿರುತ್ತವೆ. ಆ ವಿಚಾರಗಳಲ್ಲಿ ಬೇಡವಾದದ್ದೂ ಉಂಟು; ಬೇಕಾದದ್ದೂ ಉಂಟು. ತನಗೆ ಬೇಡವಾದದ್ದು ಯಾವುದೋ ಒಂದು ಹಿಡಿದುಕೊಂಡಿದೆ. ಅದರಿಂದ ಬಿಡಿಸಿಕೊಳ್ಳಬೇಕು ಎಂಬ ಭಾವ ಯಾರಿಗೆ ಬರುತ್ತದೋ ಅವನು ಆರ್ತ. ಇಂಥವರು ನಮ್ಮ ಸುತ್ತಮುತ್ತ ಹೆಚ್ಚಾಗಿ ಕಂಡುಬರುತ್ತಾರೆ. ಪ್ರತಿಯೊಂದು ಕ್ಷೇತ್ರದಲ್ಲೂ ಇಂಥವರ ಸಂಖ್ಯೆ ಹೆಚ್ಚು. ತಮಗೆ ಕಾಡಿದ ಸಮಸ್ಯೆಗಳನ್ನು ಬಿಡಿಸಿಕೊಳ್ಳಲಾರದೆ ಅವರು ಒದ್ದಾಡುತ್ತಿರುತ್ತಾರೆ. ಇನ್ನು ನಮಗೆ ಬೇಕಾದದ್ದು ಸಿಕ್ಕಿಲ್ಲ, ನಾವು ಅದನ್ನು ದೊರಕಿಸಿಕೊಳ್ಳಬೇಕು ಎಂಬ ಹಂಬಲದಿಂದ ಯಾರು ಹುಡುಕಾಟ ಮಾಡುತ್ತಿರುತ್ತಾರೋ ಅವರು ಅರ್ಥಾರ್ಥಿ. ಆದರೆ, ಜಿಜ್ಞಾಸು ಈ ಎರಡು ಬಗೆಯ ನೆಲೆಗಳಿಂದ ಭಿನ್ನನಾದವನು. ಈತ ಆರ್ತನೂ ಅಲ್ಲ; ಅರ್ಥಾರ್ಥಿಯೂ ಅಲ್ಲ. ಈತ ದೈವದ ಎದುರು ನಿಂತು 'ಏನು ಕರೆದೆಯಲ್ಲ ಎಂದು ಕೇಳಿದರೆ, ನನಗೆ ಏನೂ ಬೇಕಿಲ್ಲ. ಎಲ್ಲರೂ ದೇವರು ಎನ್ನುತ್ತಾರೆ. ಈ ನೀನು ಹೇಗಿದ್ದೀಯೋ ನೋಡೋಣ ಎಂದು ಕರೆದೆ ಎನ್ನುತ್ತಾನೆ. ಈತನೇ ನಿಜವಾದ ಜಿಜ್ಞಾಸು. ನಮ್ಮ ದೇಶದ ಮಹಾಸಂತರೆಲ್ಲರೂ ಜಿಜ್ಞಾಸು ಪ್ರವೃತ್ತಿಯಿಂದಲೇ ನಮ್ಮನ್ನು ಸೆಳೆಯುತ್ತಾರೆ.

ಪ್ರತಿಯೊಬ್ಬ ತಾರ್ಕಿಕರು ಶಬ್ದ, ಪ್ರತ್ಯಕ್ಷ, ಅನುಮಾನ, ಉಪಮಾನ ಮುಂತಾದ ಪ್ರಮಾಣಗಳನ್ನು ಅವಲಂಬಿಸಿರುತ್ತಾರೆ. ಕೆಲವರಿಗೆ ಶಬ್ದ ಮತ್ತು ಪ್ರತ್ಯಕ್ಷಗಳೇ ಪ್ರಮಾಣವಾಗಿರುವುದುಂಟು. ಮತ್ತು ಕೆಲವರು ಈ ಎರಡು ಪ್ರಮಾಣಗಳ ಜೊತೆಗೆ ಅನುಮಾನವನ್ನು ಇಟ್ಟುಕೊಂಡಿರುತ್ತಾರೆ. ಆದರೆ, ಇವರಾರು ನಿಜಾರ್ಥದಲ್ಲಿ ಜಿಜ್ಞಾಸು ಪ್ರವೃತ್ತಿಯನ್ನು ಹೊಂದಿದವರಲ್ಲ. ಜಿಜ್ಞಾಸು ಎಂಬುದು ಅರಿವಿನ ಹಾದಿ. ಈ ಹಾದಿಯು 'ಅಸಿಧಾರಾವ್ರತ ಎಂಬುದು ದಿಟದ ಮಾತು. ಜಿಜ್ಞಾಸುವಿನ ಹಂಬಲ ಸದಾ ದೊಡ್ಡದೇ. ಅವನು ಎಂದೂ ಕಿರಿದನ್ನು ಬಯಸಿದವನಲ್ಲ. ಅವನು ಸದಾ ಹಿರಿದನ್ನೇ ಬಯಸುತ್ತಾನೆ. ಇದು ಜಿಜ್ಞಾಸುವಿನ ಒಳಗಿರುವ ಶಕ್ತಿರೂಪ. ಯಾವ ಜಿಜ್ಞಾಸು ಸರಿಯಾದ ತತ್ತ್ವವನ್ನು ಹಿಡಿದು ನಡೆಯುತ್ತಾನೆಯೋ ಅವನು ಮಾತ್ರ ಬೆಳೆಯಬಲ್ಲ. ಅವನು ಒಂದುಕಡೆ ದೈವಕ್ಕೆ ಅಭಿಮುಖನಾಗಿರುತ್ತಾನೆ; ಮತ್ತೊಂದು ಕಡೆ ಮಾನುಷತತ್ತ್ವದ ಗಮ್ಯಸ್ಥಿತಿಯನ್ನು ಕೈಯಲ್ಲಿ ಹಿಡಿದಿರುತ್ತಾನೆ. ಇದು ಜಿಜ್ಞಾಸೆ ಪಡೆದವನ, ನಡೆಯುವವನ ಹಾದಿ. ಇಂಥ ಪಥದಲ್ಲಿ ಸಾಗುವುದೇ ಜಿಜ್ಞಾಸುವಿನ ಗುಣಲಕ್ಷಣ. ನಾವೀಗ 'ಜಿಜ್ಞಾಸುಪರ್ವದಲ್ಲಿದ್ದೇವೆ. ಇಲ್ಲಿ ಮಿಥ್ಯೆಯೂ ಉಂಟು, ತಥ್ಯವೂ ಉಂಟು. ಆದರೆ, ಇವೆರಡರಲ್ಲಿ ತಥ್ಯವನ್ನು ಬಳಸಿಕೊಳ್ಳುವ ವಿವೇಕವನ್ನು ನಮ್ಮೊಳಗಿನ ಜಿಜ್ಞಾಸು ಪ್ರವೃತ್ತಿ ನಮಗೆ ತಿಳಿಸಿಕೊಡಬೇಕಾಗಿದೆ.

■ **ಪುರಂಜೀವಿ**

## ಮಾತೇ ಮುತ್ತು

- ಹೆಚ್ಚು ಕಷ್ಟಪಟ್ಟು ದುಡಿದಷ್ಟೂ ಅದೃಷ್ಟ ಹೆಚ್ಚಾಗಿ ನಿಮ್ಮನ್ನು ಒಲಿಯುತ್ತದೆ.
  —ಥಾಮಸ್ ಜಫರ್ಸನ್

- ನೀತಿಶಾಸ್ತ್ರ ಮತ್ತು ಅರ್ಥಶಾಸ್ತ್ರದ ನಡುವೆ ಘರ್ಷಣೆ ಉಂಟಾದಾಗ, ಅರ್ಥಶಾಸ್ತ್ರಕ್ಕೆ ಯಾವಾಗಲೂ ಜಯವಿದೆ ಎಂದು ಇತಿಹಾಸವು ನಮಗೆ ಹೇಳುತ್ತದೆ. ಸಾಕಷ್ಟು ಬಲವನ್ನು ಬಲವಂತಪಡಿಸದ ಹೊರತು ಸ್ವಯಂಪ್ರೇರಿತ ಹಿತಾಸಕ್ತಿಗಳನ್ನು ಸ್ವಯಂಪ್ರೇರಣೆಯಿಂದ ಬಿಡಲಾಗುವುದಿಲ್ಲ.
  —ಬಾಬಾಸಾಹೇಬ್ ಅಂಬೇಡ್ಕರ್

- ಅನುಭವವೊಂದು ಅಮೂಲ್ಯ ಅಪೂರ್ವ ವಜ್ರ. ಅದಕ್ಕಾಗಿ ಎಷ್ಟೋ ಜನರು ಬೆವರು, ರಕ್ತ ಸುರಿಸಿದ್ದಾರೆ.
  —ಶೇಕ್ಸ್‌ಪಿಯರ್

- ನಮ್ಮ ವಿದ್ಯಾಭ್ಯಾಸವೇ ನಮ್ಮ ಹುಡುಗರನ್ನು ಹಳ್ಳಿಗಳಿಗೆ ಪರಕೀಯರನ್ನಾಗಿ ಮಾಡುತ್ತಿರುವುದನ್ನು ಉದಾರಣೆಯ ಬೆಳಕಿನಲ್ಲಿ ಯೋಚಿಸಿ.
  — ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ದೊಡ್ಡ ಯೋಚನೆಗಳೊಡನೆ ಇರುವವರು ಎಂದೂ ಏಕಾಂಗಿಗಳಲ್ಲ.
  — ಸರ್ ಫಿಲಿಪ್ ಸಿಡ್ನಿ

- ಎಲ್ಲರ ಆಸೆಗಳನ್ನೂ ಪೂರೈಸುವ ತಾಕತ್ತು ನಮ್ಮ ನಿಸರ್ಗಕ್ಕಿದೆ, ಎಲ್ಲರ ದುರಾಸೆಗಳನ್ನಲ್ಲ.
  —ಮಹಾತ್ಮ ಗಾಂಧೀಜಿ

- ಮಾನವ ಜನಾಂಗವನ್ನು ಬಂಧುಗಳೆಂದು ನೋಡಬೇಕು.
  —ಕುರಾನ್